ತರಗು, ಇಲ್ಲವಾದರೆ ಸಾಕಷ್ಟು ಪ್ರಮಾಣದಲ್ಲಿ ತುಂಡು ಮಾಡಿದ ಹಳೆಯ (ಬೇಡವಾದ) ಕಾಗದದ ಹಾಳೆಗಳನ್ನು ಮೂರನೆ ಒಂದು ಭಾಗದಷ್ಟಾದರೂ ಬೆರೆಸಿ, ಆರರಿಂದ ಎಂಟು ಬಾರಿಯಾದರೂ ತಿರುವಿ 40 ರಿಂದ 45 ದಿನಗಳ ನಂತರ ಎರೆಹುಳುಗಳಿಗ ಆಹಾರವಾಗಿ ಬಳಸಬಹುದು.

## ಎರೆಹುಳುಗಳನ್ನು ಸಾಕುವ ವಿಧಾನ

1. ಹಿಂದೆ ಹೇಳಿದ ಹಾಗೆ ತಯಾರಿಸಿಕೊಂಡ ತ್ಯಾಜ್ಯವನ್ನು ತೊಟ್ಟಿಗಳಿಗೆ ತುಂಬಿ ಬದಲಿಗೆ ಸಾಕಾಣಿಕೆಗೆ ಕಡಿಮೆ ಖರ್ಚಿನಲ್ಲಿ ಒಂದು ಕೊಟ್ಟಿಡಿಯನ್ನು ನಿರ್ಮಿಸಿದಲ್ಲಿ ತೊಟ್ಟಿಗಳ ಅವಶ್ಯಕತೆ ಇರುವುದಿಲ್ಲ. ಸಾಲುಗಳಲ್ಲಿ ಬೇಕಾದಷ್ಟು ಉದ್ದ, ಮೂರಡಿ ಅಗಲ ಮತ್ತು ಎರಡಡಿ ಎತ್ತರದ ರಾಶಿಗಳನ್ನು ಭದ್ರವಾದ ನೆಲದ ಮೇಲೆ ಶೇಖರಿಸಬಹುದು.
2. ತೊಟ್ಟಿಯ ಮೇಲ್ಭಾಗ ಅಥವಾ ರಾಶಿಯ ಮೇಲ್ಭಾಗದಲ್ಲಿ (8 ಅಡಿ ಉದ್ದ, 3 ಅಡಿ ಅಗಲ, 2 ಅಡಿ ಎತ್ತರದ ರಾಶಿಗೆ) ಎರಡರಿಂದ ಮೂರು ಕೆ.ಗ್ರಾಂ. ಎರೆಹುಳುಗಳನ್ನು ಬಿಡಬಹುದು.
3. ಬೇಕಿದ್ದಲ್ಲಿ ತೊಟ್ಟಿಯ ರಾಶಿಯ ಮೇಲ್ಭಾಗವನ್ನು ಮೂರರಿಂದ ನಾಲ್ಕು ಅಂಗುಲ ಒಣ ಹುಲ್ಲಿನಿಂದ ಮುಚ್ಚಿದಲ್ಲಿ ಪದೇ ಪದೇ ನೀರು ಹಾಕುವುದನ್ನು ಕಡಿಮೆ ಮಾಡಬಹುದು. ಇದರಿಂದ ಎರೆಹುಳುಗಳ ಚಟುವಟಿಕೆಗೂ ಪ್ರೋತ್ಸಾಹ ದೊರಕುವುದು.
4. ಹತ್ತು ದಿನಗಳಿಗೊಮ್ಮೆ ಮೇಲಿನ ಹುಲ್ಲನ್ನು ಸರಿಸಿ ಮೇಲೆ ಶೇಖರಣೆಯಾದ ಗೊಬ್ಬರವನ್ನು (ಎರೆಹುಳುಗಳನ್ನು ಬೇರ್ಪಡಿಸಿ) ನೀರು ಹಾಕುವ ಮುನ್ನ ಹೊರಗೆ ತೆಗೆದು, ನೆರಳಿನಲ್ಲಿ ಶೇಖರಿಸಿಕೊಳ್ಳಬೇಕು. ಈ ರೀತಿ ಮಾಡುವು ದರಿಂದ ನೀರು ಹಾಕಿದಾಗ ಗೊಬ್ಬರವು ಕರಗಿ ಒಳಗಿದ್ದ ತಿನ್ನದಿರುವ ಆಹಾರದಲ್ಲಿ ಬೆರೆಯುವುದನ್ನು ತಡೆಗಟ್ಟಬಹುದು. ಇದರಿಂದ ಎರೆಹುಳುಗಳು ಚಟುವಟಿಕೆಗೆ ಕುಂದುಬಾರದು ಮತ್ತು ಕೊನೆಯಲ್ಲಿ ಅವುಗಳನ್ನು ಬೇರ್ಪಡಿಸುವುದೂ ಸುಲಭ.
5. ತೊಟ್ಟಿಯ ತಳದಲ್ಲಿ 1/6 ಭಾಗದಷ್ಟು ತ್ಯಾಜ್ಯ ವಸ್ತುಗಳು ಇದ್ದಾಗ ಇದನ್ನು (ಹುಳುಗಳೊಡನೆ) ಹೊರತೆಗೆದು, ಮೊದಲೇ ತಯಾರಿಸಿಕೊಂಡಿರುವ ತ್ಯಾಜ್ಯದ ತೊಟ್ಟಿಯಲ್ಲಿ ತುಂಬಿ, ಅದರ ಮೇಲೆ ಹರಡಬೇಕು.
6. ಎರೆಹುಳುಗಳ ಸಂಖ್ಯೆ ಬಹಳವಾಗಿದ್ದಲ್ಲಿ ಅದನ್ನು ಎರಡು ಮೂರು ಭಾಗವಾಗಿ ವಿಂಗಡಿಸಿ ಬೇರೆ ಬೇರೆ ತೊಟ್ಟಿಗಳಿಗೆ ತುಂಬಬೇಕು.
7. ಪದೇ ಪದೇ ಬೇರ್ಪಡಿಸಿ ಗುಡ್ಡೆ ಹಾಕಿದ ಗೊಬ್ಬರದಲ್ಲಿ ಸಣ್ಣ ಮರಿಗಳು ಮತ್ತು ತತ್ತಿಗಳು (ಮೊಟ್ಟೆಗಳು) ಇರುವುವು. ಅವುಗಳನ್ನು ಪಡೆಯಲು ಗೊಬ್ಬರದ ರಾಶಿಯಲ್ಲಿ ಅಲ್ಲಲ್ಲೇ ಒಂದು ಚೆಂಡಿನ (ಕ್ರಿಕೆಟ್ ಚೆಂಡು) ಗಾತ್ರದ ಸಗಣಿಯ ಮುದ್ದೆಗಳನ್ನು ಹೂತಿಟ್ಟು, ಜಾಗದ ನೆನಪಿಗಾಗಿ ಚಿಕ್ಕ ಚಿಕ್ಕ ಕಡ್ಡಿಗಳನ್ನು (ಹಂಚಿಕಡ್ಡಿ ಅಥವಾ ತೆಂಗಿನ ಕಡ್ಡಿ) ನೆಟ್ಟು ಎರಡು ವಾರಗಳ ನಂತರ ಈ ಸಗಣಿಯ ಉಂಡೆಗಳನ್ನು ಹೊರತೆಗೆದರೆ, ಅದರಲ್ಲಿ ಸಣ್ಣ ಸಣ್ಣ ಮರಿಗಳು ಸೇರಿರುತ್ತವೆ. ಈ ಹುಳುಗಳನ್ನು ಮತ್ತೆ ತ್ಯಾಜ್ಯಗಳಿಗೆ ವರ್ಗಾಯಿಸಬೇಕು.
8. ಗೊಬ್ಬರವನ್ನು ನೆರಳಿನಲ್ಲಿ ಒಣಗಿಸಿ, ಬೇಕಿದ್ದಲ್ಲಿ ಜರಡಿ ಮಾಡಿ ಚೀಲಗಳಲ್ಲಿ ತುಂಬಿಟ್ಟು ಬೇಕಾದಾಗ ಬಳಸಬಹುದು. ಈ ರೀತಿ ತೇವಾಂಶ ಕಡಿಮೆ ಮಾಡಿ ಇಟ್ಟಲ್ಲಿ, ಒಂದು ವರ್ಷವಾದರೂ ಗೊಬ್ಬರದ ಗುಣಮಟ್ಟದಲ್ಲಿ ಬದಲಾವಣೆಯಾಗುವುದಿಲ್ಲ.

## ಎರೆಹುಳು ಸಾಕಣೆ ಮತ್ತು ಎರೆಗೊಬ್ಬರ ತಯಾರಿಕೆಯಲ್ಲಿ ಗಮನಿಸಬೇಕಾದ ವಿಷಯಗಳು

1. ಇಲಿ, ಬೆಕ್ಕು, ಪಕ್ಷಿ, ಹೆಗ್ಗಣಗಳು ಎರೆಹುಳುಗಳನ್ನು ತಿನ್ನುವುದರಿಂದ, ಇವುಗಳ ಕಾಟದಿಂದ ಕಾಪಾಡುವ ವ್ಯವಸ್ಥೆ ಮುಖ್ಯ. ಸಾಕುವಳಿಯನ್ನು ಸಿಮೆಂಟ್ ಅಥವಾ ಕಲ್ಲು ಚಪ್ಪಡಿಗಳಿಂದ ಮಾಡಿದ ತೊಟ್ಟಿಗಳಲ್ಲಿ ನಡೆಸಿದಲ್ಲಿ ಎರೆಹುಳುಗಳನ್ನು ಈ ಶತ್ರುಗಳಿಂದ ಕಾಪಾಡಬಹುದು. ಇಂತಹ ತೊಟ್ಟಿಗಳನ್ನು ಕಬ್ಬಿಣದ ಜಾಲರಿಯಿಂದ ಮುಚ್ಚುವುದು ಅತ್ಯಗತ್ಯ
2. ಒಂದು ವೇಳೆ ಇರುವೆಗಳ ಕಾಟವಿದ್ದಲ್ಲಿ ತೊಟ್ಟಿಗಳ ಸುತ್ತಲೂ ಸಣ್ಣದಾದ ಕಾಲುವೆ ಮಾಡಿ ಅದರಲ್ಲಿ ಯಾವಾಗಲೂ ನೀರಿರುವಂತೆ ನೋಡಿಕೊಳ್ಳಬೇಕು. ಇಲ್ಲದಿದ್ದಲ್ಲಿ ತೊಟ್ಟಿಗಳ ಗೋಡೆಯ ಹೊರ ಭಾಗದ ಮೇಲೆ 'ಗ್ರೀಸ್' ಅಥವಾ ಕೀಲೆಣ್ಣೆಯನ್ನು ಹಾಕಿದಲ್ಲಿ ಇವುಗಳ ದಾಳಿ ಯನ್ನು ತಪ್ಪಿಸಬಹುದು.
3. ತ್ಯಾಜ್ಯವು ಯಾವಾಗಲೂ ಸಡಿಲವಾಗಿರಬೇಕು. ಇದರಲ್ಲಿ ಗಾಳಿ ಸಂಚಾರ ಚೆನ್ನಾಗಿರಬೇಕು. ಇದರಿಂದ ಎರೆಹುಳುಗಳಿಗೂ ಬೇಕಾದ ಆಮ್ಲಜನಕವು ದೊರೆಯುವುದಲ್ಲದೆ, ಅನೇಕ ಉಪಯುಕ್ತ ಸೂಕ್ಷ್ಮ ಜೀವಿಗಳೂ ಹೆಚ್ಚಾಗುತ್ತವೆ.
4. ನೀರು ಹೆಚ್ಚಾದಲ್ಲಿ, ಎರೆಹುಳುಗಳ ಚಟುವಟಿಕೆ ಕುಂದುವುದು. ಅನೇಕ ಸಲ, ಎರೆಹುಳುಗಳು ತೊಟ್ಟಿಯಿಂದ ಹೊರಹೋಗುತ್ತವೆ ಅಥವಾ ಸಾಯುತ್ತವೆ. ನೀರು ಹಾಕುವಾಗ ಹಸಿ ಇದೆಯೋ ಇಲ್ಲವೋ ಎಂದು ಸರಿಯಾಗಿ ಗಮನಿಸಿ ನೀರು ಹಾಕಬೇಕು. ಮಳೆಗಾಲದಲ್ಲಿ ಮಳೆಯ ನೀರು ತೊಟ್ಟಿಯಲ್ಲಿ ನಿಂತರೆ ಎರೆಹುಳುಗಳಿಗೆ ತೊಂದರೆಯಾಗುತ್ತದೆ. ಆದುದರಿಂದ ಈ ತೊಟ್ಟಿಗಳ ಮೇಲೆ ಚಪ್ಪರ ಹಾಕುವುದು ಒಳ್ಳೆಯದು. ಇಲ್ಲದಿದ್ದಲ್ಲಿ ಮೋಡ ಕವಿದಾಗ ತೊಟ್ಟಿಗಳನ್ನು ಪ್ಲಾಸ್ಟಿಕ್ ಹಾಳೆಯಿಂದ ಮುಚ್ಚಬೇಕು.

## ಎರೆ ಜಲ

ಎರೆಗೊಬ್ಬರ ತಯಾರಿಸುವ ತೊಟ್ಟಿಯ ತಲಭಾಗದಲ್ಲಿ ಕೊಳವೆಯನ್ನು ಅಳವಡಿಸಬೇಕು. ಗೊಬ್ಬರದ ತಯಾರಿಕೆಗೆ ಬೇಕಾಗುವ ನೀರಿನ ಅಂಶಕ್ಕಿಂತ ಸ್ವಲ್ಪ ಹೆಚ್ಚಿನ ನೀರನ್ನು ಸಿಂಪರಿಸಿದಾಗ ಹೆಚ್ಚಾದ ನೀರು ಬಸಿದು ಕೊಳವೆಯ ಮೂಲಕ ಹೊರಬರುತ್ತದೆ. ಇದನ್ನು ಎರೆಗೊಬ್ಬರದ ನೀರು/ ಎರೆಜಲ ಅಥವಾ ಕಾಂಪೋಸ್ಟ್ ಟೀ ಎಂದು ಕರೆಯಲಾಗುತ್ತದೆ. 250–300 ಲೀ. ಗಾತ್ರದ ಸಿಮೆಂಟ್ ತೊಟ್ಟಿಯನ್ನು ಕೊಳವೆಯ ಕೆಳಗೆ ಕಟ್ಟಿದ್ದಲ್ಲಿ, ಎರೆಜಲವನ್ನು ಸಂಗ್ರಹಿಸಲಾಗುತ್ತದೆ. ಈ ನೀರಿನಲ್ಲಿ ಬೇವಿನ ಎಲೆಗಳು, ಹೊಂಗೆ, ಗ್ಲಿರಿಸಿಡಿಯಾ, ಲಾಂಟಾನಾ, ಪಾರ್ಥೇನಿಯಂ ಸೊಪ್ಪನ್ನಾಗಲಿ 20–30 ದಿನಗಳವರೆಗೆ ಕೊಳೆಯಲು ಬಿಡಬೇಕು. ಸಗಣಿ ಮತ್ತು ಗೋಮೂತ್ರವನ್ನು ಸೇರಿಸಬಹುದು. ಇವುಗಳೆಲ್ಲವೂ ಚೆನ್ನಾಗಿ ಕಳಿತ ಮೇಲೆ ಇದನ್ನು ಸೋದಿಸಿ ಅವಶ್ಯಕತೆಗೆ ತಕ್ಕಂತೆ ನೀರನ್ನು ಸೇರಿಸಿ ಗಿಡಬಳ್ಳಿಗಳ ಮೇಲೆ ಸಿಂಪರಿಸಬೇಕು ಅಥವಾ ನೀರಾವರಿಯ ಮೂಲಕ ಬಳಸಬಹುದು.


ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ :
ಐ.ಸಿ.ಎ.ಆರ್. ಕೃಷಿ ವಿಜ್ಞಾನ ಕೇಂದ್ರ, ರಾಮನಗರ
ಚಂದೂರಾಯನ ಹಳ್ಳಿ, ಕಲ್ಯಾ ಪೋಸ್ಟ್, ಮಾಗಡಿ ತಾಲ್ಲೂಕು,
ರಾಮನಗರ ಜಿಲ್ಲೆ–562120
ದೂರವಾಣಿ: 080 – 29899388
ಮಿಂಚಂಚೆ : kvkramanagara@gmail.com
ವೆಬ್‌ಸೈಟ್:www.kvkramanagara.com


# ಸುಸ್ಥಿರ ಕೃಷಿಯಲ್ಲಿ ಎರೆ ಗೊಬ್ಬರದ ಬಳಕೆ




ಲೇಖಕರು :
ಶ್ರೀಮತಿ ಪ್ರೀತು ಡಿ.ಸಿ.
ಡಾ|| ಸವಿತಾ ಎಸ್.ಎಂ.
ಡಾ|| ದಿನೇಶ್ ಎಂ.ಎಸ್.
ಡಾ|| ರಾಜೇಂದ್ರ ಪ್ರಸಾದ್ ಬಿ.ಎಸ್.
ಡಾ|| ಲತಾ ಆರ್.ಕುಲಕರ್ಣಿ


**2018–19**


ಐ.ಸಿ.ಎ.ಆರ್. ಕೃಷಿ ವಿಜ್ಞಾನ ಕೇಂದ್ರ
ರಾಮನಗರ

